ಕಾವೇರಿ ಕೃಷ್ಣ ಏತ ನೀರಾವರಿ ನಿಗಮಗಳ ಪುಗಡೆ ಕುರಿತು

446 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಕೃಷ್ಣಾ ಜಲಾನಯನದ ಅಡಿಯಲ್ಲಿ 2 ಏತ ನೀರಾವರಿ ರಚನೆ ಆಗಿದ್ದು 1990-91, 91-92, 92-93, 92-94ನೇ ಸಾಲುಗಳಲ್ಲಿ ಈ ನಿಗಮಗಳ ಸಿಬ್ಬಂದಿ ವರ್ಗಕ್ಕೆ ಆಗಿರುವ ಖರ್ಚು ಎಷ್ಟು?

ಆ) ಈ ಮೇಲ್ಕಂಡ 4 ವರ್ಷಗಳಲ್ಲಿ ಜಿಲ್ಲಾವಾರು ಎಷ್ಟು ಕಾಮಗಾರಿ ಕೈಗೊಳ್ಳಲಾಗಿದೆ ಹಾಗೂ ಕೆಲಸ ಪೂರ್ಣ ಆಗಿರುವುದೆಷ್ಟು?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು): ಅ) ಕಾವೇರಿ ಮತ್ತು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮಗಳ ಸಿಬ್ಬಂದಿಗಾಗಿ ಆಗಿರುವ ವೆಚ್ಚ ಈ ಕೆಳಕಂಡಂತಿದೆ:

ಕ್ರ ಸಂ	ಸಾಲುವಾರು ವೆಚ್ಚ	ಸಿಬ್ಬಂದಿ ವರ್ಗಕ್ಕೆ ಖರ್ಚಾದ ವೆಚ್ಚ (ಲಕ್ಷ ರೂ.ಗಳಲ್ಲಿ)
1)	1990-91	107.51
2)	1991-92	113.23
3)	1992-93	143.80
4)	1993-94	137.54

ಆ) 4 ವರ್ಷಗಳಲ್ಲಿ ಈ ಕೆಳಗೆ ಜಿಲ್ಲಾವಾರು ವಿವರಗಳಲ್ಲಿ ಹೇಳಿರುವಂತೆ ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ 19 ಹಾಗೂ ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ 6 ಹೀಗೆ ಒಟ್ಟು 25 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇಲ್ಲಿಯವರೆಗೆ ಯಾವುದೇ ಕಾಮಗಾರಿಯೂ ಪೂರ್ಣಗೊಂಡಿಲ್ಲ. ಈ ಮುಚ್ಚೆ ನಿಗಮಗಳನ್ನು ಮುಚ್ಚಿ ಆ ನಂತರ ನಿಗಮಗಳು ಕೈಗೊಂಡಿರುವ ಕಾಮಗಾರಿಗಳನ್ನು ನೀರಾವರಿ ಇಲಾಖೆಯಿಂದ ಮುಂದುವರಿಯಲು ಪರಿಶೀಲಿಸಲಾಗುತ್ತಿದೆ.

ಮೈಸೂರು	5	ಬಿಜಾಪುರ	3
ಮಂಡ್ಯ	6	ಧಾರವಾಡ	2
ಕೊಡಗು	1	ಬೆಳಗಾವಿ	1
ಬೆಂಗಳೂರು	1	ಒಟ್ಟು	6
ದಕ್ಷಿಣ ಕನ್ನಡ	1		
ಹಾಸನ	2		
ಚಿಕ್ಕಮಗಳೂರು	3		
ಒಟ್ಟು	19		

ಬೀರನಹೊಳೆ ಬಳಿಯ ಚಿಕ್ಕಸೇತುವೆ ಕಾಮಗಾರಿ ಕಳಪೆಯಾಗಿರುವುದರ ಬಗ್ಗೆ

483 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಘಟಪ್ರಭಾ ಆಯಕಟ್ಟು ಪ್ರದೇಶದ ಬರುವ ಬೀರನಹೊಳೆ ಬಳಿಯ ಚಿಕ್ಕ ಸೇತುವೆ ನಿರ್ಮಾಣ ಕಾರ್ಯದೋಷ ಯುಕ್ತವಾಗಿ ಆದು ಈಗಾಗಲೇ ಬಿರುಕು ಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಕಾಮಗಾರಿಯ ಕುರಿತು ವಿಚಾರಣೆ ಕೈಗೊಳ್ಳಲಾಗಿದೆಯೇ?